Sri G. V. GOWDA.—Is it that seniority alone is taken into consideration while giving promotion or is any other criterion taken into consideration ?

Sri R. M. PATIL.—Merit is the most important consideration. A select list is prepared and in that list merit will be taken into consideration.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸೀನಿಯಾರಿಟಿ ಒಂದೇ ಅಲ್ಲ, ಮೆರಿಟ್ ಸಹ ಇರಬೇಕು ಎಂದು ಹೇಳಿದರು. ಹೀಗೆ ಡಿಸ್ಕ್ರಿಪನರಿ ಪವರ್ಸ್ ಇಟ್ಟುಕೊಂಡರೆ ಸೀನಿಯರ್ ಆಫೀಸರುಗಳಿಗೆ ತೊಂದರೆಯಾಗುವುದಿಲ್ಲವೇ ? ಈಗ ಸೀನಿಯಾರಿಟಿಗೆ ಹೆಚ್ಚು ಮಹತ್ವವಿದೆಯೋ ಅಥವಾ ಮೆರಿಟ್‌ಗೆ ಹೆಚ್ಚು ಮಹತ್ವವಿದೆಯೋ ?

ಶ್ರೀ ಆರ್. ಎಂ. ಪಾಟೀಲ್.—ಒಂದಕ್ಕೇ ಹೆಚ್ಚು ಗಮನ ಕೊಡುವುದಕ್ಕಾಗುವುದಿಲ್ಲ. ಎರಡನ್ನೂ ಗಮನಿಸಿ ಒಂದು ನಿರ್ಧಾರಕ್ಕೆ ಬರಬೇಕಾಗುತ್ತದೆ. In certain matters, we shall have to give prominence to merit.

ಶ್ರೀ ಎ. ಜೆ. ದೊಡ್ಡಮೇಟಿ.—ಬೆಳಗಾಂ ಪ್ರದೇಶದಲ್ಲಿ ಕೆಲವು ಪೋಲೀಸ್ ಅಧಿಕಾರಿಗಳು ಸರ್ಕಾರದ ಆಜ್ಞೆಯನ್ನು ಛಾಲೆಂಜ್ ಮಾಡಿ ರಿಟ್ ಅರ್ಜಿ ಹಾಕಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಕೆಲವು ಅರ್ಜಿಗಳು ಗಮನಕ್ಕೆ ಬಂದಿವೆ. ಆದರೆ ಅವು ಬೆಳಗಾಂ ಡಿವಿಜನ್ನಿಗೆ ಸೇರಿವೆಯೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಜೆ. ಎಲ್. ಕಬಾಡಿ.—ಕೆಲವು ಸಂದರ್ಭಗಳಲ್ಲಿ ಬಡ್ತಿ ಕೊಡಲು ವಿಶೇಷ ಕಾರಣವೇನಿತ್ತು ?

ಶ್ರೀ ಆರ್. ಎಂ. ಪಾಟೀಲ್.—ಹಾಗೇನೂ ಇಲ್ಲ. ಇರುವ ಸಂಪ್ರದಾಯದ ಪ್ರಕಾರ ಕೊಡಲಾಗಿದೆ.

ಶ್ರೀ ಗಂಗಾಧರ ನಾಮೋಷಿ.—ಇನ್‌ಸ್ಪೆಕ್ಟರನ್ನು ರಿವರ್ಟ್‌ಮಾಡಿರುವ ಬಗ್ಗೆ ಮನವಿಗಳು ಸರ್ಕಾರಕ್ಕೆ ಬಂದಿರುವುದು ಗೊತ್ತಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಕೆಲವು ಬಂದಿವೆ.

Sri R. M. PATIL.—What has been provided in the S.R. Act regarding protection of the cadre in which they were serving while the States Reorganisation took place has been followed.

Sri G. V. GOWDA.—If anything against that has happened, will Government examine those cases ?

Sri R. M. PATIL.—Government always tak s into consideration all the provisions of the S.R. Act.

ಶ್ರೀ ಜೆ. ಎಲ್. ಕಬಾಡಿ.—ಬಡ್ತಿ ಕೊಡುವುದರಲ್ಲಿ ಅನ್ಯಾಯವಾಗಿದೆ ಎಂದು ಎಷ್ಟು ಅರ್ಜಿ ಬಂದಿವೆ ?

Sri R. M. PATIL.—It is too general a question because there are thousands of Police Officers.

Sri G. V. GOWDA.—I am aware that Government is giving protection. But my question is, if the Heads of Departments act in a way against the provisions of the S.R. Act, will Government examine those cases and give justice to the persons affected ?

Sri R. M. PATIL.—It goes without saying.

Starting of Schools in Chamarajanagar Taluk.

*Q.—436. Sri M. C. BASAPPA (Chamarajanagar).—

Will the Government be pleased to state :—

(*a*) when did the Compulsory Education Scheme come into force in the State ;

(*b*) the number of villages that are without schools in Chamarajanagar Taluk ;

(*c*) whether they have received any proposals to start schools this year in Chamarajanagar Taluk ;

(*d*) when do they intend starting schools in all the villages in Chamarajanagar Taluk ?

A.—Sri S. R. KANTHI (Minister for Education).—

(*a*) From 1st August 1961.

(*b*) Fourteen.

(*c*) Yes.

(*d*) Schools have been sanctioned to nine villages with a population of 300 and above during the current year and the remaining five villages with a population of less than 300 each will be provided after examining the needs of those villages.

Sri M. C. BASAPPA.—How many teachers have been sanctioned for this year ?

†ಶ್ರೀ ಎಸ್. ಆರ್. ಕಂಠಿ.—ಆ ಸಮಾಚಾರ ನನ್ನ ಬಳಿ ಇಲ್ಲ.

ಶ್ರೀ ಎಂ. ಸಿ. ಬಸಪ್ಪ.—ಈಗ 9 ಶಾಲೆಗಳನ್ನು ಮಂಜೂರು ಮಾಡಿದ್ದೀರಿ. ಆದರೆ ಆ ಶಾಲೆಗಳಿಗೆ ಒಬ್ಬ ಉಪಾಧ್ಯಾಯರನ್ನು ಕಳುಹಿಸಿಲ್ಲವೆಂದು ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್ ಕಂಠಿ.—ಕಳುಹಿಸಿರಬಹುದು. ಒಂದು ವೇಳೆ ಕಳುಹಿಸಿಲ್ಲದಿದ್ದರೆ ಕಳುಹಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ನಮ್ಮ ತಾಲ್ಲೂಕಿಗೆ ಸುಮಾರು 140 ಉಪಾಧ್ಯಾಯರಾದರೂ ಬೇಕು

† Indicates that the remarks or speeches have not been revised by the member concerned.

ಎಂದು ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.— ಜಾಸ್ತಿ ಉಪಾಧ್ಯಾಯರು ಪ್ರತಿಯೊಂದು ತಾಲ್ಲೂಕಿಗೂ ಬೇಕಾಗಿದೆ. ಈ ವರ್ಷ ಎರಡು ಸಾವಿರ ಉಪಾಧ್ಯಾಯರುಗಳನ್ನು ಮಂಜೂರು ಮಾಡಿದೆ, ಇಷ್ಟರಲ್ಲೆ ನೇಮಕ ಮಾಡುತ್ತೇವೆ.

ಶ್ರೀ ಟಿ. ಮಾದಯ್ಯಗೌಡ.—ಮಕ್ಕಳ ಸಂಖ್ಯೆ ಶಾಲೆಗಳನ್ನು ತೆರೆಯುವ ಸ್ಥಳಗಳಲ್ಲಿ ಸಾಕಷ್ಟಿದೆಯೆ ಎಂದು ವಿಚಾರ ಮಾಡಿದ್ದೀರಾ ?

ಶ್ರೀ ಎಸ್. ಆರ್. ಕಂಠಿ. —ಸಾಕಷ್ಟು ಸಂಖ್ಯೆಯಿದ್ದರೆ ಶಾಲೆಗಳನ್ನು ಕೊಡಬೇಕಾಗುತ್ತದೆ. 300 ಜನರಿಗಿಂತ ಕಡಮೆಯಿರುವ ಗ್ರಾಮಗಳೂ ಇವೆ.

ಶ್ರೀ ಟಿ. ಮಾದಯ್ಯಗೌಡ.— 250 ಜನರಿರುವ ಗ್ರಾಮಗಳಲ್ಲಿ 40 ಮಕ್ಕಳೂ ಸಿಕ್ಕುವುದಿಲ್ಲವೆ ?

ಶ್ರೀ ಎಸ್. ಆರ್. ಕಂಠಿ.—ಕೆಲವು ಕಡೆ ಸಿಕ್ಕದಿರುವ ಸಂದರ್ಭಗಳಿವೆ.

ಶ್ರೀ ಗಾಂಜಿ ವೀರಪ್ಪ.—ಈಗಿರುವ ರೂಲ್ಸ್‌ಪ್ರಕಾರ ಉಪಾಧ್ಯಾಯರನ್ನು ನೇಮಿಸಲು ತೊಂದರೆಯಾಗುತ್ತಿರುವುದು ಅವಗಾಹನೆಗೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.— ಇದರ ನಿವಾರಣೆಗೆ ಪ್ರಯತ್ನ ಮಾಡಲಾಗುತ್ತಿದೆ.

ಶ್ರೀ ಜಿ. ವಿ. ಗೌಡ.— ಈ ಸಾರಿ ಎಷ್ಟು ಶಾಲೆಗಳನ್ನು ಆರಂಭಿಸಲಾಗಿದೆ ? ಹಿಂದೆ ಎಷ್ಟು ಕೊರತೆಯಿತ್ತು ?

ಶ್ರೀ ಎಸ್. ಆರ್. ಕಂಠಿ.— ಹೋದ ವರ್ಷ 1,700 ಕ್ಕಿಂತ ಹೆಚ್ಚು ಶಾಲೆಗಳನ್ನು ತೆರೆಯಬೇಕಾಯಿತು. ಈ ವರ್ಷ 250 ಶಾಲೆಗಳನ್ನು ಜಾಸ್ತಿಯಾಗಿ ತೆರೆಯಬೇಕೆಂದು ಅಂದಾಜಿದೆ. ಶಾಲೆಗಳನ್ನು ಕೊಟ್ಟಿರುವ ಕಡೆಗೆ ಒಬ್ಬೊಬ್ಬ ಉಪಾಧ್ಯಾಯರನ್ನಾದರೂ ಕೊಡಬೇಕು. ಕೆಲವು ಕಡೆ ಹುಡುಗರು ಜಾಸ್ತಿ ಇರುವುದರಿಂದ ಹೆಚ್ಚು ಉಪಾಧ್ಯಾಯರನ್ನು ನೇಮಿಸಬೇಕಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಸದಸ್ಯರ ಸಂಖ್ಯೆಯನ್ನು 5ಕ್ಕೆ ಏರಿಸಿದರು. ಆದ್ದರಿಂದ ಈ ಉಪಾಧ್ಯಾಯರನ್ನು ನೇಮಿಸುವ ಅಧಿಕಾರ ಡಿವಿಜನಲ್ ಕಮಿಟಿಯವರಿಗೆ ಹೋಗುತ್ತದೆಯೇ ಅಥವಾ ಅವರಿಗೇ ಇರುತ್ತದೆಯೇ ?

ಶ್ರೀ ಎಸ್. ಆರ್. ಕಂಠಿ — ಡಿವಿಜನಲ್ ರೆಕ್ರೂಟ್‌ಮೆಂಟ್ ಕಮಿಟಿಗೇ ಅದು ಹೋಗುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯ.— ಈಗಾಗಲೇ ನಾಲ್ಕು ಸಾವಿರ ಉಪಾಧ್ಯಾಯರನ್ನು ನೇಮಿಸಿದ್ದೇವೆಂದು ಹೇಳಿದಿರಿ, ಅವರೆಲ್ಲರೂ ಬೇಸಿಕ್ ಟ್ರೈನಿಂಗ್ ಪಾಸ್ ಆದವರೇ ?

ಶ್ರೀ ಎಸ್. ಆರ್. ಕಂಠಿ.—ಎಸ್. ಎಸ್. ಎಲ್. ಸಿ. ಪಾಸಾದವರು.

ಶ್ರೀ ಬಿ. ಎಲ್. ಗೌಡ.— ಡಿವಿಜನಲ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿಯಿಂದ ಅನೇಕ ಜನಗಳಿಗೆ ತೊಂದರೆಯಾಗಿದೆ. ಬಹಳ ದೂರದಿಂದ ಬರಬೇಕು. ಆದ್ದರಿಂದ ಜಿಲ್ಲಾ ಮಟ್ಟದಲ್ಲಿ ಒಂದು ರೆಕ್ರೂಟ್‌ಮೆಂಟ್ ಕಮಿಟಿ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.— ಆ ಸೂಚನೆ ಇದೆ. ಅದನ್ನು ಯೋಚನೆ ಮಾಡಿ ನೋಡುತ್ತೇವೆ.

ಶ್ರೀ ಡಿ. ಎಂ. ಸಿದ್ದಯ್ಯ.—ಉಪಾಧ್ಯಾಯರುಗಳಿಗೆ ಬೇಸಿಕ್ ಟ್ರೈನಿಂಗ್ ಆಗಿರತಕ್ಕದ್ದು ಅವಶ್ಯಕ ಎಂಬುದನ್ನು ಒಪ್ಪುತ್ತೀರಾ ?

ಶ್ರೀ ಎಸ್. ಆರ್. ಕಂಠಿ.–ನೇಮಿಸುವ ಮುಂಚೆಯೇ ಬೇಸಿಕ್ ಟ್ರೈನಿಂಗ್ ಆಗಿರತಕ್ಕ ಉಪಾಧ್ಯಾಯರು ಸಿಕ್ಕುವುದಿಲ್ಲ. ಪ್ರೈವೇಟ್ ಬೇಸಿಕ್ ಟ್ರೈನಿಂಗ್ ಆದವರು ಇರುತ್ತಾರೆ, ಅವರು ಸಿಕ್ಕುತ್ತಾರೆ. ಉಪಾಧ್ಯಾಯರನ್ನು ಕೆಲಸಕ್ಕೆ ನೇಮಿಸಿಕೊಂಡ ಮೇಲೆ ಅವರನ್ನು ಟ್ರೈನಿಂಗಿಗೆ ಕಳುಹಿಸುತ್ತೇವೆ.

ಶ್ರೀ ಟಿ. ಮಾದಯ್ಯಗೌಡ.—ಎಲ್ಲೆಲ್ಲ ಸ್ಕೂಲುಗಳನ್ನು ಸ್ಯಾಂಕ್ಷನ್ ಮಾಡುತ್ತಿರೋ ಅಲ್ಲಿಗೆ ಬೇಕಾಗತಕ್ಕ ಸಾಮಾನು ಮತ್ತು ಸರಂಜಾಮುಗಳನ್ನು ಒದಗಿಸುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಒಂದು ಸ್ಕೂಲಿಗೆ ಒಬ್ಬ ಉಪಾಧ್ಯಾಯರನ್ನು ನೇಮಿಸಿದರೆ ಅಲ್ಲಿಗೆ 250ರೂಪಾಯಿಗಳನ್ನು ಕೊಡುತ್ತೇವೆ.

ಶ್ರೀ ಜಿ. ವಿ. ಗೌಡ.—ಒಂದು ವರ್ಷಕ್ಕೆ ಎಷ್ಟು ಜನ ಉಪಾಧ್ಯಾಯರುಗಳಿಗೆ ತರಬೇತನ್ನು ಕೊಡುತ್ತೀರಿ ?

ಶ್ರೀ ಎಸ್. ಆರ್. ಕಂಠಿ.— ಒಟ್ಟು ನಮ್ಮ ದೇಶದಲ್ಲಿ 30 ಟ್ರೈನಿಂಗ್ ಕಾಲೇಜುಗಳಿವೆ. ಆ ಕಾಲೇಜುಗಳಲ್ಲಿ ಒಂದು ವರ್ಷಕ್ಕೆ 7500 ಉಪಾಧ್ಯಾಯರು ತರಬೇತಿಯನ್ನು ಪಡೆಯುತ್ತಿದ್ದಾರೆ.

ಶ್ರೀ ಜಿ. ವಿ. ಗೌಡ.—ಸರ್ಕಾರದ ಕಡೆಯಿಂದ ಎಷ್ಟು ಜನ ಉಪಾಧ್ಯಾಯರನ್ನು ತರಬೇತಿಗಾಗಿ ಕಳುಹಿಸುತ್ತೀರಿ ?

ಶ್ರೀ ಎಸ್. ಆರ್. ಕಂಠಿ.—ಒಂದು ವರ್ಷಕ್ಕೆ ಒಂದು ಸಾವಿರ ಉಪಾಧ್ಯಾಯರನ್ನು ತರಬೇತಿಗಾಗಿ ನಾವು ಕಳುಹಿಸುತ್ತಿದ್ದೇವೆ.

ಶ್ರೀ ಜೆ. ದೇವಯ್ಯ.— ಎಲ್ಲಾ ಶಾಲೆಗಳಿಗೂ ಯೋಗ್ಯವಾದ ಕಟ್ಟಡಗಳಿವೆಯೇ ?

ಶ್ರೀ ಎಸ್. ಆರ್. ಕಂಠಿ.— ಎಲ್ಲಾ ಶಾಲೆಗಳಿಗೂ ಕಟ್ಟಡ ಇಲ್ಲ ಎನ್ನುವುದು ಒಪ್ಪುವ ಮಾತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— ಈಗ ಎರಡು ಸಾವಿರ ಜನ ಉಪಾಧ್ಯಾಯರನ್ನು ನೇಮಕ ಮಾಡುತ್ತೇವೆಂದು ಹೇಳಿದಿರಿ, ಅದರಲ್ಲಿ ಟ್ರೇನ್ಡ್ ಉಪಾಧ್ಯಾಯರು ಎಷ್ಟು ಜನ, ಅನ್ ಟ್ರೇನ್ಡ್ ಉಪಾಧ್ಯಾಯರು ಎಷ್ಟು ಜನ ?

ಶ್ರೀ ಎಸ್. ಆರ್. ಕಂಠಿ.— ಎರಡು ಸಾವಿರ ಜನ ಉಪಾಧ್ಯಾಯರ ಪೈಕಿ ಟ್ರೇನ್ಡ್ ಆದವರು ಬಹಳ ಕಡಿಮೆ. ಎಲ್ಲಾ ಅನ್ ಟ್ರೇನ್ಡ್ ಇರುತ್ತಾರೆ. ಎಸ್. ಎಸ್. ಎಲ್. ಸಿ. ಪಾಸಾದವರನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— ಪ್ರೈವೇಟ್ ಮತ್ತು ಗೌರ್ನಮೆಂಟ್ ಎರಡು ಇನ್‌ಸ್ಟಿಟ್ಯೂಷನ್‌ಗಳಲ್ಲಿಯೂ ಟ್ರೇನಪ್ ಆದವರು ಅನೇಕ ಜನ ಕೆಲಸ ಇಲ್ಲದೆ ಕೆಲಸ ಬೇಕು ಎಂದು ಪಬ್ಲಿಕ್ ಸರ್ವಿಸ್ ಕಮಿಷನ್ ಮುಂದೆ ಮತ್ತು ಡಿವಿಜನಲ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿ ಮುಂದೆ ಅಲೆಯುತ್ತಿದ್ದಾರೆ. ಅದಕ್ಕೋಸ್ಕರವಾಗಿ ತಮ್ಮಲ್ಲಿ ಇರತಕ್ಕ ಮಾಹಿತಿ ಪ್ರಕಾರ ಎಷ್ಟು ಜನ ಟ್ರೇನ್ಡ್ ಟೀಚರ್ಸ್ ಕೊಡುತ್ತೀರಿ ?

ಶ್ರೀ ಎಸ್. ಆರ್. ಕಂಠಿ.— ಈ ಪ್ರಶ್ನೆಗೆ ಉತ್ತರ ಕೊಡುವುದು ಕಷ್ಟ. ಡಿವಿಜನಲ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿಗೆ ಯಾರು ಅರ್ಜಿಯನ್ನು ಕೊಡುತ್ತಾರೆಯೋ ಅವರನ್ನು ಆರಿಸುತ್ತಾರೆ. ಅದರಲ್ಲಿ ಟ್ರೇನಿಂಗ್ ಆದವರಿಗೆ ಪ್ರಿಫರೆನ್ಸ್ ಕೊಡಬೇಕೆಂದು ಹೇಳಿದೆ.

ಶ್ರೀ ಡಿ. ಎಂ. ಸಿದ್ದಯ್ಯ.— ಒಂದು ವರ್ಷಕ್ಕೆ ಒಂದು ಸಾವಿರ ಜನಗಳಿಗೆ ಬೇಸಿಕ್‌ಟ್ರೇನಿಂಗ್ ಕೊಡುತ್ತೇವೆಂದು ಹೇಳಿದಿರಿ. ಅದು ಸಾಕಾಗುವುದಿಲ್ಲ. ಆದ್ದರಿಂದ ಬೇಸಿಕ್ ಟ್ರೇನಿಂಗ್ ಸೆಂಟರ್ಸ್ ಜಾಸ್ತಿ ಮಾಡಿ ಒಂದು ವರ್ಷಕ್ಕೆ ಎರಡು ಸಾವಿರ ಉಪಾಧ್ಯಾಯರುಗಳಿಗೆ ಟ್ರೇನಿಂಗ್ ಕೊಡುವ ಹಾಗೆ ಮಾಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ನಮ್ಮಲ್ಲಿ ಈಗ ಕೆಲವು ಗೌರ್ನ್‌ಮೆಂಟ್ ಟ್ರೇನಿಂಗ್ ಕಾಲೇಜುಗಳಿವೆ. ಕೆಲವು ಪ್ರೈವೇಟ್ ಟ್ರೇನಿಂಗ್ ಕಾಲೇಜುಗಳಿವೆ. ಇನ್ನು ಮೇಲೆ 300 ಜನ ಹೆಚ್ಚು ಮಾಡಿ ಒಂದು ವರ್ಷಕ್ಕೆ 1300 ಜನ ಉಪಾಧ್ಯಾಯರನ್ನು ತರಪೇತಿಗಾಗಿ ಕಳುಹಿಸುತ್ತೇವೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಈಗಾಗಲೇ ಟ್ರೇನಿಂಗ್ ಆಗಿರುವವರಿಗೆ ಕೆಲಸ ಸಿಕ್ಕುತ್ತಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಅದು ಬಂದರೆ ಅದನ್ನು ನೋಡುತ್ತೇವೆ.

Grant of Industrial Loans to persons from former Bombay-Karnatak Districts.

*Q.—509. Sri M. V. SHETTY (Chikodi).—

Will the Government be pleased to state :—

(*a*) the number of persons who applied for grant of Industrial loans from former Bombay Karnataka Districts during the years 1958-59 to 1961-1962 and their names ;

(*b*) the number of persons to whom such loans were granted and the amount granted to them ?

*A.—Sri K. MALLAPPA (Minister for Industries and Commerce).—

(*a*) 39. *Vide* statement given below.

(*b*) 6. The amount varied from Rs. 3,000 to Rs. 60,000.

STATEMENT.

Showing the names of persons who applied for grant of loans under the State Aid to Industries Rules from former Bombay Karnataka Districts from 1st April 1958 to 31st March 1962.

Sl. No.	Names
	Messrs. :—
1	T. Y. Miskin
2	S. R. Rajaput
3	K. P. Gadag
4	Govindappa Vithoba Koparde
5	Veerayya Shivalingayya Salimath
6	Shankarappa Basappa Ambli
7	Siddaramappa Adiveppa Aganur
8	Mahadevappa Mallappa Bhadrannavar
9	B. N. Bengeri
10	Kareppa Annappa Narayakar
11	Mallappa Thippannappa Nutchi
12	Devappa Nagappa Gathade
13	R. K. Kurtkoti
14	M. B. Aribenchi
15	A. R. Tavarageri and R. K. Bellad
16	N. N. Mandre
17	Virupakshappa Lingappa Seeri
18	Mahamed Sab, Syed Sab Dhoji
19	M. Vittala Rao
20	Managing Agents, Bijapur Electric Supply Co. Ltd.
21	Veerbhadrappa
22	Kumta Consumers' Co-operative Society Limited.
23	D. B. Meelanawar
24	V. S. Kotur
25	V. K. Huliyarkar
26	R. S. Havanagi
27	M. B. Kulkarni
28	S. R. Bane
29	M. K. Attar Sons
30	B. P. Porwal
31	D. K. Chowdhary
32	Mysore Swastic Industries
33	Tippannasa Ramachandrasa Khabadi
34	Pitambara Buddappa Pol
35	Lakshman Bhimappa
36	Ajjappa *alias* Prabu Rudrappa
37	Arwind Shivamurthappa Sharkhane
38	Bhivaraj Chandulal Betala
39	C. B. Javalgi

ಶ್ರೀ ಎಂ. ವಿ. ಶೆಟ್ಟಿ.—ಈಗ ಒಟ್ಟು ರಾಜ್ಯದಲ್ಲಿ ಕೊಟ್ಟ ರಕಂ ಎಷ್ಟು ?

†ಶ್ರೀ ಕೆ. ಮಲ್ಲಪ್ಪ.—ಆ ಡೀಟೈಲ್ಸ್ ಈಗ ನನ್ನ ಹತ್ತಿರ ಇಲ್ಲ.

ಶ್ರೀ ಎಂ. ವಿ. ಶೆಟ್ಟಿ.—ಈಗ ಕೈಗಾರಿಕಾ ಸಾಲಗಳನ್ನು 6 ಜನಗಳಿಗೆ ಕೊಟ್ಟಿದೆ ಎಂದು ಹೇಳಿದ್ದೀರಿ. ಆ ಆರು ಜನಗಳಿಗೆ ಎಷ್ಟು ಸಾವಿರ ರೂಪಾಯಿಗಳು ಮುಟ್ಟಿದೆ ?

Sri K. MALLAPPA.—In one case, it is 3,000 ; in another case it is 10,000 ; in the third case it is 10,000 ; in the fourth case it is 15,000 ; in the fifth case it is 25,000 ; in the sixth case it is Rs. 60,000.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಒಟ್ಟು ಕೈಗಾರಿಕಾ ಸಾಲಗಳ ಮಂಜೂರಾತಿಗಾಗಿ 39 ಜನ ಅರ್ಜಿ